

# ನಿಶಾಚರಿ ಹವಳ ಜರಿ

**ಗಾಢ ಕೇಸರಿ ಹಾಗೂ ಕಪ್ಪು ವರ್ಣ ವಿನ್ಯಾಸದ ದೇಹ ರಚನೆಯಿಂದ ಮಿರುಗುವ ಜರಿಯನ್ನು 'ಜೀವಂತ ಪಳೆಯುಳಿಕೆ' ಎಂದು ಪರಿಗಣಿಸಲಾಗಿದೆ.**

■ **ಶಶಿಧರಸ್ವಾಮಿ ಆರ್. ಹಿರೇಮಠ**

ರಾತ್ರಿ ಹತ್ತರ ಸಮಯ. ಮತ್ತಿಘಟ್ಟದಿಂದ ಯಾಣದತ್ತ ನಮ್ಮ ಪಯಣ ಸಾಗುತ್ತಿತ್ತು. ರಸ್ತೆ ಪಕ್ಕ ಜುಳು ಜುಳು ಹರಿಯುವ ಝರಿ. ಮಂಡೂಕಗಳ ವಟಗುಟ್ಟುವಿಕೆ. ಕಪ್ಪೆಗಳ ಚಿತ್ರ ತೆಗೆಯಲು ಮುಂದಾಗುತ್ತಿದ್ದಂತೆ ಅವುಗಳ ಹಿಂದೆ ಕೇಸರಿ–ಕಪ್ಪು ಬಣ್ಣದ ಜೀವಿಯೊಂದು ಕ್ಯಾಮೆರಾ ಕಣ್ಣಿಗೆ ಗೋಚರಿಸಿತು.

ಅದು ಬೇರೇನೂ ಅಲ್ಲ, 'ಹವಳ ಜರಿ' ಅಥವಾ 'ಹುಲಿ ಜರಿ'.

ನಮ್ಮ ಭಾಗದಲ್ಲಿ (ಉತ್ತರ ಕರ್ನಾಟಕ) ಇದನ್ನು 'ಹವಳ ಜರಿ' ಎಂದು ಕರೆಯುತ್ತಾರೆ. ಇದರ ಗಾಢ ಕೇಸರಿ ಬಣ್ಣದ ಮೈ ಖಂಡ ಹೊಳೆಯುವ ಹವಳದಂತೆ ಕಾಣುವುದರಿಂದ ಹೀಗೆ ಕರೆಯುವುದುಂಟು. ನಿಧಿಯನ್ನು ಕಾಯುತ್ತದೆ ಎಂಬ ನಂಬಿಕೆಯಿಂದ 'ಲಕ್ಷ್ಮಿ ಚೇಳು' ಎಂತಲೂ ಕರೆಯುತ್ತಾರೆ. ಕಪ್ಪು–ಕೇಸರಿ ಪಟ್ಟೆ ಪಟ್ಟೆ ಇರುವ ಚೇಳಾದ್ದರಿಂದ ಇದನ್ನು 'ಪಟ್ಚೇಳು' ಎನ್ನುತ್ತಾರೆ.

ಕಪ್ಪು ಮತ್ತು ಕೇಸರಿ (ಗಾಢ ಕಿತ್ತಳೆ) ಬಣ್ಣದ ಪಟ್ಟಿಗಳು ಹುಲಿಯ ಮೈಮೇಲಿನ ವರ್ಣ ವಿನ್ಯಾಸವನ್ನೇ ಹೋಲುವುದರಿಂದ 'ಹುಲಿ ಪಟ್ಚೇಳು', 'ಹುಲಿ ಲಕ್ಷ್ಮಿ ಚೇಳು' ಅಥವಾ 'ಹುಲಿ ಜರಿ' ಎಂಬ ಭಿನ್ನ ಭಿನ್ನ ಹೆಸರಿನಿಂದ ಕರೆಯಲಾಗುತ್ತದೆ.

ಇಂಗ್ಲಿಷ್‌ನಲ್ಲಿ 'ಇಂಡಿಯನ್ ಟೈಗರ್ ಸೆಂಟಿಪೆಡ್' ಎಂದು ಇದರ ಹೆಸರು. ವೈಜ್ಞಾನಿಕವಾಗಿ ಸ್ಕೋಲೋಪೇಂಡ್ರ ಹಾರ್ಡ್‌ವಿಕಿ (Scolopendra hardwickei) ಎಂದು ಹೆಸರಿಸಲಾಗಿದೆ.

## ಇರುಳಿನಲ್ಲಿ ಅಲೆದಾಡುವ ಜೀವಿ

6ರಿಂದ 16 ಸೆಂ.ಮೀ.ನಷ್ಟು ಉದ್ದದವರೆಗೆ ಬೆಳೆಯಬಲ್ಲ ಈ ಹವಳ ಜರಿಯ ದೇಹ ಚಪ್ಪಟೆಯಾಗಿದೆ. ದೇಹಕ್ಕೆ ಚರ್ಮದ ಕವಚವಿದೆ. ಗಾಢ ಕೇಸರಿ (ಕಿತ್ತಳೆ) ಮತ್ತು ಕಪ್ಪಿನ ಸಂಯೋಜನೆಯ ಪ್ರಕಾಶಮಾನ ಮತ್ತು ವ್ಯತಿರಿಕ್ತ ಬಣ್ಣಗಳ 17 ಅಥವಾ 18 ಖಂಡ (ವಿಭಾಗ) ಇರುತ್ತವೆ. ತಲೆಯಲ್ಲಿ ಅನೇಕ ತುಂಡುಗಳಿಂದ ಕೂಡಿದ ಒಂದು ಜೊತೆ ಕುಡಿಮೀಸೆಯೂ, ಅದರ ಹಿಂಭಾಗದಲ್ಲಿ ಒಂದು ಜೊತೆ ಕಣ್ಣುಗಳೂ ಇರುತ್ತವೆ. ದೇಹದ ಪ್ರತಿ ಖಂಡಕ್ಕೆ ಒಂದು ಜೋಡಿ ಕಾಲುಗಳಂತೆ 21ರಿಂದ 23 ಜೊತೆ ಕಾಲುಗಳನ್ನು ಹೊಂದಿರುತ್ತದೆ.

ಅನೇಕ ಮಾಂಸಾಹಾರಿ ಪ್ರಾಣಿಗಳಂತೆ, ಒಂಟಿಯಾಗಿ ರಾತ್ರಿ ವೇಳೆ ಆಹಾರಕ್ಕಾಗಿ ತಿರುಗಾಡುತ್ತಾ ಸಣ್ಣ ಕೀಟಗಳು, ಹುಳುಗಳು, ಮಿಡತೆ, ಜೇಡ, ಪತಂಗ, ಇತರ ಸಣ್ಣ ಜೀವಿಗಳನ್ನು ಮತ್ತು ಚೇಳುಗಳನ್ನೂ ಬೇಟೆಯಾಡಿ ಭಕ್ಷಿಸುತ್ತದೆ. ಕುರುಚಲು ಕಾಡು, ನಿತ್ಯಹರಿದ್ವರ್ಣ ಕಾಡುಗಳು ಮತ್ತು ಸಮಶೀತೋಷ್ಣ ಕಾಡುಗಳಂತಹ ವೈವಿಧ್ಯಮಯ ಆವಾಸಸ್ಥಾನಗಳನ್ನು ಆಕ್ರಮಿಸಿಕೊಂಡಿದೆ. ನಿಶಾಚರಿಯಾದ ಇದು ತೇವವಿರುವ ಕತ್ತಲೆ ಪ್ರದೇಶಗಳ ಕಲ್ಲುಗಳ ಕೆಳಗೆ, ಬಿರುಕುಗಳಲ್ಲಿ, ಮರದ ತೊಲೆ, ತೊಗಟೆಗಳ ಕೆಳಗೆ ಮತ್ತು ತರಗೆಲೆಗಳಲ್ಲಿ ವಾಸಿಸುತ್ತದೆ.

ನಿರುಪದ್ರವಿಯಾದರೂ ತನ್ನ ದೊಡ್ಡ ಗಾತ್ರದಿಂದಲೇ ಎಲ್ಲರಲ್ಲೂ ದಿಗಿಲು ಹುಟ್ಟಿಸುತ್ತದೆ. ವಿಷಕಾರಿ ಅಲ್ಲ. ಆದರೆ ಮನುಷ್ಯನಿಗೆ ಕಚ್ಚಿದರೆ ಸ್ವಲ್ಪ ನಂಜು, ಉರಿ ಉಂಟಾಗಬಹುದು. ಇಲ್ಲವೇ ಅರೆ ಮೂರ್ಛಾವಸ್ಥೆ ಸ್ಥಿತಿ ಉಂಟಾಗಬಹುದು. ಮನುಷ್ಯರಿಗೆ ಕಚ್ಚಿದ ಸಂದರ್ಭ ತೀರಾ ಕಡಿಮೆ. ನಿಧಾನವಾಗಿ ಚಲಿಸುವ ಇದನ್ನು ಕಂಡರೆ, ಪೊರಕೆ ಸಹಾಯದಿಂದ ದೂರ ತಳ್ಳಿಬಿಡುತ್ತಾರೆಯೇ ಹೊರತು, ಸಾಯಿಸುವುದಿಲ್ಲ. ಪಟ್ಚೇಳು ಸೇರಿದಂತೆ ಇತರೆ ಜರಿಗಳು ಮನೆಯೊಳಗೆ ಬಂದರೆ ಸಾಯಿಸಬಾರದು ಎಂಬ ನಂಬಿಕೆ ಇದೆ.

ಉದ್ದವಾದ, ಖಂಡಯುಕ್ತ ವಿಭಜಿತ ದೇಹ ಮತ್ತು ಬಹುಕಾಲು ಹೊಂದಿರುವ ನಿಕಟ ಸಂಬಂಧಿಯಾದ ಸಹಸ್ರಪದಿಗಳಲ್ಲಿ ಪ್ರತಿ ವಿಭಾಗದಲ್ಲಿ ಎರಡು ಜೋಡಿ ಕಾಲುಗಳಿದ್ದರೆ, ಶತಪದಿಗಳಲ್ಲಿ ಪ್ರತಿ ವಿಭಾಗದಲ್ಲಿ ಕೇವಲ ಒಂದು ಜೋಡಿ ಕಾಲುಗಳಿರುತ್ತವೆ. 400 ಮಿಲಿಯನ್ ವರ್ಷಗಳಿಂದಲೂ ಈ ಶತಪದಿಗಳ ದೇಹ ರಚನೆಯಲ್ಲಿ ಹೆಚ್ಚು ಬದಲಾಗಿಲ್ಲ. ಆದ್ದರಿಂದ ಅವುಗಳನ್ನು ಈ ಭೂಮಿ ಮೇಲಿನ 'ಜೀವಂತ ಪಳೆಯುಳಿಕೆಗಳು' ಎಂದೇ ಕರೆಯಲಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in